## ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ. ರವರ ನ್ಯಾಯಾಲಯ, ಹೊಳಲ್ಕೆರೆ

## ಸಿ.ಸಿ. ನಂ. 1131/2023

ದಿನಾಂಕ - 11/06/2024

| | | | | | |
|---|---|---|---|---|---|
| ಸಾಕ್ಷಿದಾರರ ಹೆಸರು | - | ಪ್ರತಾಪ್ ಪಿ. | ಪ್ರಾ.ಸಾ. | - | 01 |
| ತಂದೆಯ ಹೆಸರು | - | ಪರಮೇಶ್ವರಪ್ಪ | ಚಾ.ಸಾ. | - | 02 |
| ವಯಸ್ಸು | - | 27 ವರ್ಷ | | | |
| ಉದ್ಯೋಗ | - | ಚಾಲಕ | | | |
| ವಾಸ ಸ್ಥಳ | - | ಚಿಕ್ಕ ಎಮ್ಮಿಗನೂರು ಗ್ರಾಮ | | | |

<u>ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.</u>

<u>ಮುಖ್ಯ ವಿಚಾರಣೆಃ ಮಾನ್ಯ ಸ.ಸ.ಅ ರವರಿಂದಃ</u>

ನ್ಯಾಯಾಲಯದ ಮುಂದೆ ಇರುವ ಆರೋಪಿ ಗೊತ್ತಿಲ್ಲ. ಚಾಸಾ–3 ಗೊತ್ತು. ಅವರು ನಮ್ಮ ಊರಿನವರು. ಚಾಸಾ–1, 3 ರಿಂದ 6 ಗೊತ್ತು.

ಸಾಕ್ಷಿಗೆ ಈ ಹಂತದಲ್ಲಿ ಒಂದು ದಾಖಲೆಯನ್ನು ತೋರಿಸಿದ್ದು, ಸದರಿ ದಾಖಲೆಯು ದಿಃ15/07/2023 ರಂದು ಪಂಚರಿಗೆ ನೀಡಿದ ನೋಟೀಸ್ ಆಗಿದ್ದು, ಸದರಿ ನೋಟೀಸ್ ನಲ್ಲಿರುವ ತನ್ನ ಸಹಿಯನ್ನು ಸಾಕ್ಷಿ ನೋಡಿ ಗುರುತಿಸಿದ್ದು, ಸದರಿ ದಾಖಲೆಯನ್ನು ನಿಪಿ–1 ಎಂದು, ಸಾಕ್ಷಿಯ ಸಹಿಯನ್ನು ನಿಪಿ–1(ಎ) ಎಂದು ಗುರುತಿಸಲಾಯಿತು.

ಸಾಕ್ಷಿಗೆ ಈ ಹಂತದಲ್ಲಿ ಒಂದು ದಾಖಲೆಯನ್ನು ತೋರಿಸಿದ್ದು, ಸದರಿ ದಾಖಲೆಯು ಈ ಪ್ರಕರಣದಲ್ಲಿ ದಿಃ15/07/2023 ರಂದು ಮಾಡಿದ ಸ್ಥಳ ಮತ್ತು ಅಮಾನತ್ತು ಪಂಚನಾಮೆಯಾಗಿದ್ದು, ಸದರಿ ಸ್ಥಳ ಮತ್ತು ಅಮಾನತ್ತು ಪಂಚನಾಮೆಯನ್ನು ಸಹಿಯನ್ನು ಸಾಕ್ಷಿ ನೋಡಿ ಗುರುತಿಸಿದ್ದು, ಸದರಿ ದಾಖಲೆಯನ್ನು ನಿಪಿ–2 ಎಂದು, ಸಾಕ್ಷಿಯ ಸಹಿಯನ್ನು ನಿಪಿ–2(ಎ) ಎಂದು ಗುರುತಿಸಲಾಯಿತು. ಸಾಕ್ಷಿಗೆ ಒಂದು ಫೋಟೋವನ್ನು ತೋರಿಸಿದ್ದು ಸದರಿ ಫೋಟೋವನ್ನು ಸಾಕ್ಷಿ ನೋಡಿ ಗುರುತಿಸಿದ್ದು ಅದನ್ನು ನಿಪಿ–3 ಎಂದು ಗುರುತಿಸಲಾಯಿತು. ಸದರಿ ಫೋಟೋವನ್ನು ಪೊಲೀಸರು ಯಾವ ಕಾರಣಕ್ಕೆ ತೆಗೆದಿರುತ್ತಾರೆ ಎಂದು ನನಗೆ ಗೊತ್ತಿಲ್ಲ.

ಈ ಪ್ರಕರಣದಲ್ಲಿ ವಶಪಡಿಸಿಕೊಳ್ಳಲಾದ ವಸ್ತುಗಳ ಮೇಲೆ ಅಂಟಿಸಿರುವ ಪಂಚರ ಸಹಿಯುಳ್ಳ ಮಾದರಿ ಚೀಟಿಯನ್ನು ತೋರಿಸಿದ್ದು, ಸದರಿ ಚೀಟಿಯಲ್ಲಿರುವ ತನ್ನ ಸಹಿಯನ್ನು ಸಾಕ್ಷಿ ನೋಡಿ ಗುರುತಿಸಿದ್ದು, ಸದರಿ ಪ್ರಕರಣದಲ್ಲಿ ವಶಪಡಿಸಿಕೊಳ್ಳಲಾದ ಮುದ್ದೆ ಮಾಲಿನ ವಸ್ತುಗಳನ್ನು ಎಂ.ಓ.1 ಎಂದು, ಸದರಿ ಎಂ.ಓ.1 ರ ಮೇಲಿ ಅಂಟಿಸಿರುವ ಸಾಕ್ಷಿಯ ಸಹಿಯುಳ್ಳ ಚೀಟಿಯಲ್ಲಿರುವ ತನ್ನ ಸಹಿಯನ್ನು ಎಂ.ಓ.1(ಎ) ಎಂದು ಗುರುತಿಸಲಾಯಿತು.

ನಿಪಿ–1, 2 ಮತ್ತು ಎಂ.ಓ.1 ರ ಮೇಲಿನ ಸಹಿಯನ್ನು ಈಗ್ಗೆ ಸುಮಾರು 01 ವರ್ಷದ ಹಿಂದೆ ಹೊಳಲ್ಕೆರೆ ಗೇಟ್ ಹತ್ತಿರ ಪೊಲೀಸ್ ನವರು ಸದರಿ ಸಹಿಗಳನ್ನು ಪಡೆದಿರುತ್ತಾರೆ. ನಾನು ನಿಪಿ–2 ಕ್ಕೆ ಸಹಿ ಮಾಡುವಾಗ ಬೇರೆ ಯಾರು ನನ್ನ ಸಮಕ್ಷಮ ಸಹಿ ಮಾಡಿಲ್ಲ. ನನ್ನ ಸಮಕ್ಷಮ ಯಾವುದೇ ಪಂಚನಾಮೆ ಮಾಡಿಲ್ಲ ಮತ್ತು ಯಾವುದೇ ವಸ್ತುಗಳನ್ನು ಮತ್ತು ಮಧ್ಯವನ್ನು ವಶಪಡಿಸಿಕೊಂಡಿಲ್ಲ. ನಿಪಿ.1 ಮತ್ತು 2 ರಲ್ಲಿ ಏನು ಬರೆದಿದೆ ಎಂಬುದು ನನಗೆ ಗೊತ್ತಿಲ್ಲ ಮತ್ತು ಪೊಲೀಸರು ನನಗೆ ಓದಿ ಹೇಳಿಲ್ಲ ಮತ್ತು ಪೊಲೀಸರು ಮುಂದೆ ಯಾವುದೇ ಹೇಳಿಕೆ ನೀಡಿಲ್ಲ.

(ಈ ಹಂತದಲ್ಲಿ ಸರ್ಕಾರಿ ಅಭಿಯೋಜಕರು ಸಾಕ್ಷಿಯು ವ್ಯತಿರಿಕ್ತವಾಗಿ ಸಾಕ್ಷ್ಯ ನುಡಿಯುತ್ತಿದ್ದು, ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಕೋರುತ್ತಾರೆ. ಅನುಮತಿ ನೀಡಲಾಯಿತು)

**<u>ಪಾಟೀ ಸವಾಲುಃ ಮಾನ್ಯ ಸ.ಸ.ಅ ರವರಿಂದಃ</u>**

ದಿ:15/07/2023 ರಂದು ಸಂಜೆ 7.15 ಗಂಟೆ ಸಮಯದಲ್ಲಿ ನಾನು ಮತ್ತು ಚಾಸಾ–2 ರವರು ಚಿಕ್ಕ ಎಮ್ಮಿಗನೂರು ಗ್ರಾಮದ ಹೊರವಲಯದಲ್ಲಿ ನಡೆದುಕೊಂಡು ಹೋಗುತ್ತಿರುವಾಗ ಅದೇ ವೇಳೆಗೆ ಚಾಸಾ–1 ರವರು ಮತ್ತು ಅವರ ಸಿಬ್ಬಂದಿಗಳಾದ ಚಾಸಾ–5, 6 ರವರು ಇಲಾಖಾ ವಾಹನದಲ್ಲಿ ಅಲ್ಲಿಗೆ ಬಂದು ಚಾಸಾ–1 ರವರು ಚಿಕ್ಕ ಎಮ್ಮಿಗನೂರು ಗ್ರಾಮದ ಮಂಜುನಾಥ ತಂದೆ ಮುದ್ದಪ್ಪರ ಮಹದೇವಪ್ಪರವರ ಕಿರಾಣಿ ಅಂಗಡಿಯ ಮುಂಭಾಗದ ಸಾರ್ವಜನಿಕ ಸ್ಥಳದಲ್ಲಿ ವಿದ್ಯುತ್ ದೀಪದ ಬೆಳಕಿನಲ್ಲಿ ಯಾರೋ ಅಕ್ರಮವಾಗಿ ಮದ್ಯವನ್ನು ಮಾರಾಟ ಮಾಡುತ್ತಿರುವುದಾಗಿ ಮಾಹಿತಿ ಬಂದಿರುತ್ತದೆ ಎಂದು ತಿಳಿಸಿರುತ್ತಾರೆ ಎಂದರೆ ಸರಿಯಲ್ಲ. ನಂತರ ಆ ಬಗ್ಗೆ ದಾಳಿ ಮಾಡಬೇಕೆಂದು ತಿಳಿಸಿ ನಮಗೆ ನಿಪಿ–1 ರಂತೆ ನೋಟೀಸು ಜಾರಿ ಮಾಡಿರುತ್ತಾರೆ ಎಂದರೆ ಸರಿಯಲ್ಲ. ನಂತರ ನಾವು ಪಂಚರಾಗಿ ಸಹಕರಿಸಲು ಒಪ್ಪಿದ್ದರಿಂದ ನಮಂನ್ನು ಸದರಿ ಇಲಾಖಾ ಜೀಪಿನಲ್ಲಿ ಕರೆದುಕೊಂಡು ಹೋದರು ಎಂದರೆ ಸರಿಯಲ್ಲ. ನಂತರ ಸದರಿ ಮಾಹಿತಿ ಬಂದ ಸ್ಥಳಕ್ಕೆ ಇಲಾಖಾ ಜೀಪಿನಲ್ಲಿ ಅದೇ

ದಿನ ಸಂಜೆ 7.30 ಗಂಟೆಗೆ ಹೋದೆವು ಎಂದರೆ ಸರಿಯಲ್ಲ. ಸದರಿ ಮಾಹಿತಿ ಬಂದ ಸ್ಥಳದ ಸ್ವಲ್ಪ ದೂರದಲ್ಲಿ ಇಲಾಖಾ ವಾಹನವನ್ನು ನಿಲ್ಲಿಸಿ ಮರೆಯಲ್ಲಿ ನಿಂತು ನೋಡಿದಾಗ ಚಿಕ್ಕ ಎಮ್ಮಿಗನೂರು ಗ್ರಾಮದ ಮಂಜುನಾಥ ತಂದೆ ಮುದ್ದಪ್ಪರ ಮಹದೇವಪ್ಪರವರ ಕಿರಾಣಿ ಅಂಗಡಿಯ ಮುಂಭಾಗದ ಸಾರ್ವಜನಿಕ ಸ್ಥಳದಲ್ಲಿ ವಿದ್ಯುತ್ ದೀಪದ ಬೆಳಕಿನಲ್ಲಿ ಯಾರೋ ಒಬ್ಬ ವ್ಯಕ್ತಿ ನಿಂತಿದ್ದನು ಎಂದರೆ ಸರಿಯಲ್ಲ. ಅಲ್ಲಿ ಸದರಿ ವ್ಯಕ್ತಿ ತನ್ನ ಕೈಯಲ್ಲಿ ಹಿಡಿದುಕೊಂಡಿದ್ದ ಒಂದು ಪ್ಲಾಸ್ಟಿಕ್ ಚೀಲದಲ್ಲಿ ಇದ್ದಂತಹ ಮದ್ಯದ ಪೌಚುಗಳನ್ನು ಸಾರ್ವಜನಿಕರಿಗೆ ಮಾರಾಟ ಮಾಡುತ್ತಿರುವುದು ಕಂಡುಬಂತು ಎಂದರೆ ಸರಿಯಲ್ಲ. ನಂತರ ನಮ್ಮ ಸಮಕ್ಷಮ ಪೊಲೀಸರು ದಾಳಿ ಮಾಡಲು ಮುಂದಾದಾಗ ಸಮವಸ್ತ್ರದಲ್ಲಿದ್ದ ಪೊಲೀಸರ ನ್ನು ಕಂಡು ಸದರಿ ವ್ಯಕ್ತಿ ಮತ್ತು ಅಲ್ಲಿದ್ದ ಜನರು ಓಡಿ ಹೋದರು ಎಂದರೆ ಸರಿಯಲ್ಲ. ನಂತರ ಸದರಿ ಮದ್ಯ ಮಾರಾಟ ಮಾಡುತ್ತಿದ್ದ ವ್ಯಕ್ತಿ ತನ್ನ ಕೈಯಲ್ಲಿದ್ದ ಪ್ಲಾಸ್ಟಿಕ್ ಚೀಲವನ್ನು ಸ್ಥಳದಲ್ಲಿಯೇ ಬಿಟ್ಟು ಓಡಿ ಹೋದನು ಎಂದರೆ ಸರಿಯಲ್ಲ. ಸದರಿ ವ್ಯಕ್ತಿಯನ್ನು ಪೊಲೀಸರು ಹಿಡಿಯಲು ಪ್ರಯತ್ನಿಸಿದರೂ ಸಹ ಸದರಿ ವ್ಯಕ್ತಿ ತಪ್ಪಿಸಿಕೊಂಡಿರುತ್ತಾನೆ ಎಂದರೆ ಸರಿಯಲ್ಲ. ನಂತರ ಪೊಲೀಸರು ಸದರಿ ಸ್ಥಳಕ್ಕೆ ವಾಪಾಸು ಬಂದು ಸ್ಥಳದಲ್ಲಿ ಬಿಟ್ಟು ಹೋಗಿದ್ದ ಪ್ಲಾಸ್ಟಿಕ್ ಚೀಲವನ್ನು ನಮ್ಮಗಳ ಸಮಕ್ಷಮ ಪರಿಶೀಲಿಸಿದಾಗ ಸದರಿ ಚೀಲದಲ್ಲಿ ಮದ್ಯದ ಪೌಚುಗಳು ಇರುವುದು ಕಂಡುಬಂತು ಎಂದರೆ ಸರಿಯಲ್ಲ. ಸದರಿ ಪ್ಲಾಸ್ಟಿಕ್ ಚೀಲದಲ್ಲಿ 90 ಎಂ.ಎಲ್.ನ ರಾಜಾ ವಿಸ್ಕಿ ಪೌಚುಗಳು ಇರುವುದು ಕಂಡುಬಂತು ಎಂದರೆ ಸರಿಯಲ್ಲ. ಸದರಿ ವ್ಯಕ್ತಿ ಅಕ್ರಮವಾಗಿ ಸರ್ಕಾರದಿಂದ ಯಾವುದೇ ಪರವಾನಗಿ ಪಡೆಯದೇ 50 ರಾಜಾ ವಿಸ್ಕಿ ಪೌಚುಗಳನ್ನು ಅಕ್ರಮ ಸ್ವಾಧೀನ ಹೊಂದಿ ಸಾರ್ವಜನಿಕರಿಗೆ ಮಾರಾಟ ಮಾಡಲು ಹೊಂದಿರುತ್ತಾನೆ ಎಂದರೆ ಸರಿಯಲ್ಲ.

ನಂತರ ಚಾಸಾ–1 ರವರು ಸದರಿ ರಾಜಾ ವಿಸ್ಕಿ ಪೌಚುಗಳನ್ನು ಅಕ್ರಮವಾಗಿ ಮಾರಾಟ ಮಾಡುವ ಸಲುವಾಗಿ ಸದರಿ ವ್ಯಕ್ತಿ ಸ್ವಾಧೀನ ಹೊಂದಿರುವ ಬಗ್ಗೆ ಖಚಿತ ಪಡಿಸಿಕೊಂಡರು ಎಂದರೆ ಸರಿಯಲ್ಲ. ನಂತರ ಚಾಸಾ–1 ರವರು ಸದರಿ ಎಲ್ಲಾ ರಾಜಾ ವಿಸ್ಕಿ ಪೌಚುಗಳನ್ನು ನನ್ನ ಮತ್ತು ಚಾಸಾ–3 ರವರ ಸಮಕ್ಷಮ ಅದೇ ದಿನ ಸಂಜೆ 7.30 ರಿಂದ 8.30 ರವರೆಗೆ ವಿದ್ಯುತ್ ದೀಪದ ಬೆಳಕಿನ ಸಹಾಯದಿಂದ ಅಮಾನತ್ತು ಪಂಚನಾಮೆ ಮಾಡಿ ವಶಪಡಿಸಿಕೊಂಡಿರುತ್ತಾರೆ ಎಂದರೆ ಸರಿಯಲ್ಲ. ಸದರಿ ರಾಜಾ ವಿಸ್ಕಿ ಪೌಚುಗಳನ್ನು ರಾಸಾಯನಿಕ ಪರೀಕ್ಷೆಗಾಗಿ ಅದೇ ಪ್ಲಾಸ್ಟಿಕ್ ಚೀಲದಲ್ಲಿ ದಾರದಿಂದ ಕಟ್ಟಿ K ಎಂಬ ಅಕ್ಷರದಿಂದ ಸೀಲು ಮಾಡಿ ಮುಂದಿನ ಕ್ರಮಕ್ಕಾಗಿ ನಮ್ಮ ಸಮಕ್ಷಮ ವಶಪಡಿಸಿಕೊಂಡಿರುತ್ತಾರೆ

ಎಂದರೆ ಸರಿಯಲ್ಲ. ನಂತರ ಮಾದರಿ ನಕಲು ಚೀಟಿಗಳನ್ನು ಸ್ಥಳದಲ್ಲಿಯೇ ತಯಾರಿಸಿ ನನ್ನ ಮತ್ತು ಚಾಸಾ–1 ರವರ ಸಮಕ್ಷಮ ಸಹಿ ಮಾಡಿ ಅಂಟಿಸಿರುತ್ತಾರೆ ಎಂದರೆ ಸರಿಯಲ್ಲ. ನಂತರ ವಶಪಡಿಸಿಕೊಂಡ ರಾಜಾ ವಿಸ್ಕಿ ಪೌಚುಗಳನ್ನು ಇಲಾಖೆಯ ವಶಕ್ಕೆ ಪಡೆದಿರುತ್ತಾರೆ ಎಂದರೆ ಸರಿಯಲ್ಲ.

ದಿಃ 16/07/2023 ರಂದು ಈ ಮೇಲೆ ಹೇಳಿದಂತೆ ಚಾಸಾ–11 ರವರಿಗೆ ನಿಪಿ–4 ರಂತೆ ಮೇಲೆ ಹೇಳಿದಂತೆ ಹೇಳಿಕೆ ಕೊಟ್ಟಿರುತ್ತೇನೆ ಎಂದರೆ ಸರಿಯಲ್ಲ. ಆ ದಿನ ನ್ಯಾಯಾಲಯದ ಮುಂದೆ ಇರುವ ಆರೋಪಿಯೇ ಅಕ್ರಮವಾಗಿ ರಾಜಾ ವಿಸ್ಕಿ ಪೌಚುಗಳನ್ನು ಸ್ವಾಧೀನಹೊಂದಿ ಸಾರ್ವಜನಿಕರಿಗೆ ಮಾರಾಟ ಮಾಡುತ್ತಿದ್ದನು ಎಂದರೆ ಸರಿಯಲ್ಲ.

ಆ ದಿನ ಒಟ್ಟು 90 ಎಂ.ಎಲ್.ನ 50 ರಾಜಾ ವಿಸ್ಕಿ ಪೌಚುಗಳನ್ನು ನನ್ನ ಮತ್ತು ಚಾಸಾ–3 ರವರ ಸಮಕ್ಷಮ ನಿಪಿ–2 ರಂತೆ ಮಹಜರ್ ಮಾಡಿ ಸದರಿ ಸ್ಥಳದಲ್ಲಿ ರಾಸಾಯನಿಕ ಪರೀಕ್ಷೆಗಾಗಿ ವಶಪಡಿಸಿಕೊಂಡರು ಎಂದರೆ ಸರಿಯಲ್ಲ. ಆರೋಪಿ ನಮ್ಮ ಊರಿನವನಾಗಿರುವುದರಿಂದ ಈ ಪ್ರಕರಣಕ್ಕೆ ಸಂಬಂಧಿಸಿದಂತೆ ನನಗೆ ಎಲ್ಲಾ ಮಾಹಿತಿ ಇದ್ದರೂ ಸಹಾ ಆರೋಪಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲು: ಆರೋಪಿತರ ಪರವಾಗಿ : ಇರುವುದಿಲ್ಲ**

**ಮರು ವಿಚಾರಣೆ :ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಬೆರಳ್ಚುಪಡಿಸಿದೆ)

ಓ ಹೇ ಕೇ ಸರಿ ಇದೆ

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಜೆಎಂಎಫ್‌ಸಿ, ಹೊಳಲ್ಕೆರೆ.